ಮಗಳಿಗೆ ಸಂಗೀತ ಕಲಿಸುವ ಮನಸ್ಸು ಬಾಬಾಗಿರಲಿಲ್ಲ. ಹಿರಿಮಗಳು ಜಹಾನಾರಾಗೆ ಬಾಬಾ ಸೊಗಸಾಗಿ ಸಂಗೀತ ಕಲಿಸಿದ್ದರು. ಆದರೆ ಸಂಗೀತವನ್ನು ತುಂಬಾ ಪ್ರೀತಿಸುತ್ತಿದ್ದ ಜಹಾನಾರ ಸೇರಿದ್ದು ಸಂಗೀತದ ಗಂಧಗಾಳಿಯಿಲ್ಲದ, ಅದನ್ನು ದ್ವೇಷಿಸುತ್ತಿದ್ದ ಕುಟುಂಬಕ್ಕೆ. ಅವಳನ್ನು ಹಾಡಲು ಬಿಡದೆ, "ನಿನ್ನ ತಂಬೂರಿಯನ್ನು ಸುಟ್ಟುಬಿಡುತ್ತೇವೆ" ಎಂದು ಹೆದರಿಸುತ್ತಿದ್ದರವರು. ಕಿರುಕುಳ ತಾಳಲಾರದೆ ಜಹಾನಾರಾ ತವರಿಗೆ ಬಂದು, ತಾಯಿಯ ತೊಡೆಯ ಮೇಲೆ ಪ್ರಾಣಬಿಟ್ಟಳು. ಸದಾ ಕಾಡುತ್ತಿದ್ದ ಈ ದುರಂತದ ನೆನಪಿನಿಂದಾಗಿ ಬಾಬಾ ಅನ್ನಪೂರ್ಣಾಳಿಗೆ ಸಂಗೀತವನ್ನೇ ಕಲಿಸಲಿಲ್ಲ. ತಮ್ಮ ಇಡೀ ಸಮಯವನ್ನು ಮಗ ಅಲಿ ಅಕ್ಬರ್‌ನಿಗೇ ಮೀಸಲಿಟ್ಟರು.

ಒಮ್ಮೆ, ತಾನವೊಂದನ್ನು ಅಲಿ ಅಕ್ಬರ್‌ಗೆ ಎಷ್ಟು ಬಾರಿ ಹೇಳಿ ಕೊಟ್ಟರೂ ಬಾರದಿದ್ದಾಗ, ಸಿಟ್ಟಿಗೆದ್ದ ಬಾಬಾ, ಅವನನ್ನು ಬೈದು ಮಾರುಕಟ್ಟೆಗೆ ಹೋದರು. ಅದರೆ ಮರೆತಿದ್ದ ಪಾಕೀಟು ಒಯ್ಯಲು ಅರ್ಧದಾರಿಯಲ್ಲೇ ವಾಪಸ್ಸು ಬಂದವರಿಗೆ ಮನೆಯೊಳಗೆ ಸೊಗಸಾದ ಧ್ವನಿಯೊಂದು ಹಾಡುತ್ತಿರುವುದು ಕೇಳಿತು. ಆಗಷ್ಟೇ ತಾವು ಹೇಳಿಕೊಟ್ಟಿದ್ದ ಆ 'ತಾನ್' ಅನ್ನು ಅನ್ನಪೂರ್ಣಾ ತನ್ನ ಕಂಚಿನಂತಹ ದನಿಯಲ್ಲಿ ಅಣ್ಣನಿಗೆ ಹೇಳಿಕೊಡುತ್ತಿದ್ದಳು. ಅಂದಿನಿಂದ ಬಾಬಾ ಅನ್ನಪೂರ್ಣಳಿಗೆ ಸಂಗೀತ ಕಲಿಸಲಾರಂಭಿಸಿದರು. ಇದು ಭಾರತೀಯ ವಾದ್ಯಸಂಗೀತದಲ್ಲಿ ವಿಶ್ವದಲ್ಲೇ ಅತಿ ಉತ್ಕೃಷ್ಟ ಕಲಾವಿದೆಯ ಜನನಕ್ಕೆ ನಾಂದಿಯಾಯಿತು.

ಬಾಬಾ ತನ್ನ ಅತ್ಯಂತ ಪ್ರೀತಿಯ ಶಿಷ್ಯ ರವಿಶಂಕರನೊಂದಿಗೆ ಅವಳ ಮದುವೆ ಮಾಡಿದರು. ಸಮಾನಮನಸ್ಕರ ಈ ಮದುವೆಯಿಂದ ಅವಳು ಸುಖವಾಗಿರುತ್ತಾಳೆಂದು ಭಾವಿಸಿದ್ದರು. ಮದುವೆಯಾದಾಗ ಅನ್ನಪೂರ್ಣಾಗೆ ಹದಿನೈದು ವರ್ಷ, ರವಿಶಂಕರ್‌ಗೆ ಇಪ್ಪತ್ತೊಂದು ವರ್ಷ. ರವಿಶಂಕರ್ ಹಾಗೂ ಅನ್ನಪೂರ್ಣಾದೇವಿ ಒಂದೆರಡು ಬಾರಿ ಸುರಬಹಾರ್ ಹಾಗೂ ಸಿತಾರ್ ಜುಗಲ್‌ಬಂದಿ ನುಡಿಸಿದರು. ಆದರೆ ಬದುಕಿನ ಜುಗಲ್‌ಬಂದಿ ಯಶಸ್ವಿಯಾಗಿ ನುಡಿಯಲೇ ಇಲ್ಲ. ಕ್ರಮೇಣ ಅನ್ನಪೂರ್ಣಾದೇವಿಯವರು ಸಾರ್ವಜನಿಕವಾಗಿ ಕಾರ್ಯಕ್ರಮ ನೀಡುವುದನ್ನೇ ನಿಲ್ಲಿಸಿ, ಲೋಕದ ಸಂಬಂಧವನ್ನೇ ಕಡಿದು ಕೊಂಡು ನಾಲ್ಕು ಗೋಡೆಗಳಿಗೆ ತಮ್ಮ ಬದುಕನ್ನು ಸೀಮಿತಗೊಳಿಸಿಕೊಂಡರು. ಈ ಬಗ್ಗೆ ನೂರಾರು ಕಥೆಗಳು ಹರಡಿಕೊಂಡವು. ಸಂದರ್ಶನವೊಂದರಲ್ಲಿ, "ನನಗೆ ಕಾರ್ಯಕ್ರಮಗಳಲ್ಲಿ ಸಿಗುತ್ತಿದ್ದ ಮೆಚ್ಚುಗೆಯನ್ನು ಅವರು (ರವಿಶಂಕರ್) ಸಹಿಸುತ್ತಿರಲಿಲ್ಲ" ಎಂದದ್ದು ಇನ್ನಷ್ಟು ಅಂತೆಕಂತೆಗಳಿಗೆ ಕಾರಣವಾಯ್ತು.

ಇವರ ಮದುವೆಯಾದ ವರ್ಷದೊಳಗೇ ಹುಟ್ಟಿದ ತುಂಬಾ ಸುಂದರವಾದ, ಪ್ರತಿಭಾನ್ವಿತ ಮಗು ಶುಭೇಂದು ಶಂಕರ್. ತಾತ ಅಲ್ಲಾವುದ್ದೀನ್‌ಖಾನರು ಉಳಿದ ಮೊಮ್ಮಕ್ಕಳೊಂದಿಗೆ ಶುಭೋವಿಗೂ ಸರೋದ್ ಕಲಿಸಲಾರಂಭಿಸಿದರು. ರವಿಶಂಕರ್ ಹೆಚ್ಚಾಗಿ ಪ್ರವಾಸದಲ್ಲಿ ಇರುತ್ತಿದ್ದರು. ಹಾಗಾಗಿ ಪ್ರಾರಂಭದಲ್ಲಿ ಅವನು ಬೆಳೆದದ್ದೆಲ್ಲಾ ತಾಯಿಯ ಆರೈಕೆಯಲ್ಲೇ. ರವಿಶಂಕರರ ಕೀರ್ತಿ ಜಗತ್ತಿನ ಉದ್ದಗಲಕ್ಕೂ ಹರಡುತ್ತಿತ್ತು, ಆದರೆ ಇವರು ತಮ್ಮ ಮಗ ಶುಭೇಂದುವಿಗೆ ಪಾಠ ಹೇಳುತ್ತಾ ಬಾಂಬೆಯ ಫ್ಲ್ಯಾಟ್‌ಗೆ ತಮ್ಮ ಬದುಕನ್ನು ಸೀಮಿತಗೊಳಿಸಿಕೊಂಡು, ಮೌನದೊಂದಿಗೆ ಗೆಳೆತನ ಮಾಡಿಕೊಂಡರು. ಅನ್ನಪೂರ್ಣಾದೇವಿ ಅವನಿಗೆ ಕಟ್ಟುನಿಟ್ಟಾದ ತರಬೇತಿ ನೀಡಿದರು. ಅದು ಅವನಿಗೆ ಕಠಿಣವಾಯಿತೇನೋ? ಮುಂದೆ ಅವನಿಗೆ ರವಿಶಂಕರ್ ಸಿತಾರ್ ಕಲಿಸಲಾರಂಭಿಸಿದರು. ಮಗ ಅಪ್ಪನ ದಾರಿಯಲ್ಲೇ ಸಾಗುವುದು ಅನ್ನಪೂರ್ಣಾರಿಗೂ ಖುಷಿಯೆನಿಸಿತ್ತು. ಸರೋದ್, ಸುರ್‌ಬಹಾರ್ ಹಾಗೂ ಸಿತಾರ್ ಮೀಟುತ್ತಿದ್ದ ಅವನ ಬೆರಳುಗಳು ಚಿತ್ರವನ್ನೂ ಸೊಗಸಾಗಿ ಬಿಡಿಸುತ್ತಿದ್ದವು. ತಂದೆತಾಯಿ ಇಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ದಿಗ್ಗಜರು. ಹಾಗಾಗಿ ಆ ಒತ್ತಡ ಅವನ ಮೇಲಿತ್ತು. "ಇವರೆಲ್ಲರ ನಡುವೆ ನಿಮ್ಮ ಐಡೆಂಟಿಟಿಯೇ ಇಲ್ಲವಾಗಿಬಿಡುತ್ತದೆ" ಎಂದು ಶುಭೋ ಹೇಳಿಕೊಂಡಿದ್ದ. ತಂದೆತಾಯಿಯ ನಡುವಿನ ಹೊಯ್ದಾಟಗಳ ಒತ್ತಡವೂ ಶುಭೋನ ಮೇಲಿತ್ತು. ನೋವಿನಲ್ಲೇ ಬೆಳೆದ ಮಗು ಶುಭೋ. ಅಮ್ಮನಿಂದ ದೂರವಾಗಿ, ಅಮೆರಿಕೆಯಲ್ಲಿದ್ದ ಅಪ್ಪನ ಬಳಿ ಹೋದ. ಅಲ್ಲೇ ಮದುವೆಯಾದ. ಸದಾ ತಳಮಳದಲ್ಲೇ ಇದ್ದ ಶುಭೋ ಬ್ರಾಂಕಿಯಲ್ ನ್ಯುಮೋನಿಯದಿಂದ ಕಿರಿಯ ವಯಸ್ಸಿನಲ್ಲೇ ಕಣ್ಮರೆಯಾದ. ಮಗನನ್ನು ಕಳೆದುಕೊಂಡಾಗಲೂ ಇವರ ಪ್ರತಿಕ್ರಿಯೆ ಮೌನವೇ ಆಗಿತ್ತು.

ನಾಲ್ಕು ಗೋಡೆಗಳ ಒಳಗಿದ್ದೇ ಸಂಗೀತದ ಅಂತರಾಳ, ಆಧ್ಯಾತ್ಮಿಕತೆಯ ದಾರಿ ಅರಸುತ್ತಾ, ಕೀರ್ತಿ, ಬಿರುದು ಬಾವಲಿ, ಹಣ ಇವುಗಳ ಆಮಿಷದಿಂದ ದೂರವುಳಿದರು. ಕೆಲವೇ ಆಯ್ದ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಾ ಮನೆಯೊಳಗೇ ಉಳಿದರು. ಈ ಮಧ್ಯೆ ಅವರು ತಮ್ಮಲ್ಲಿ ಸಂಗೀತ ಕಲಿಯುತ್ತಿದ್ದ ಋಷಿಕುಮಾರ್ ಪಾಂಡ್ಯರನ್ನು ಮದುವೆಯಾದರು. ಋಷಿಕುಮಾರ್ ದಿದಿಗೆ ಒತ್ತಾಸೆಯಾಗಿದ್ದರು. ಒಂಟಿತನ ಅವರ ಬದುಕಿಗಂಟಿದ್ದ ಶಾಪವಾಗಿತ್ತೇನೋ! ಪಾಂಡ್ಯ ಅವರೊಂದಿಗೆ ಮಾತನಾಡುತ್ತಾ ಕೂತಿದ್ದಾಗಲೇ ಹೃದಯಾಘಾತದಿಂದ ಕೊನೆಯುಸಿರೆಳೆದರು.

